**ದಿ: 21-06-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು : 13 ಮತ್ತು 35 ಪ್ರತಿವಾದಿ ಪರ ವಕೀಲರಾದ ಶ್ರೀ ಎಂ. ಜಯರಾಮ್ ಶೆಟ್ಟಿ ರವರಿಂದ**

ಶ್ರೀಮತಿ ಮಂಜಿ ಪೂಜಾರ್ತಿ ಎನ್ನುವವರು ದಾವಾ ಆಸ್ತಿಗಳನ್ನು ಗೇಣಿಗೆ ಪಡೆದಿದ್ದರು. ಸದರಿ ಶ್ರೀಮತಿ ಮಂಜಿ ಪೂಜಾರ್ತಿ 1961ನೇ ಸಾಲಿನಲ್ಲಿ ಮರಣ ಹೊಂದಿದ್ದಾರೆ ಎಂದರೆ ಸರಿ. ಶ್ರೀಮತಿ ಮಂಜಿ ಪೂಜಾರ್ತಿ ಮರಣ ಹೊಂದಿದ ನಂತರ ದಾವಾ ಆಸ್ತಿಗಳನ್ನು ಶ್ರೀ ಚಿಕ್ಕ ಪೂಜಾರಿ ಎನ್ನುವವರು ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. ಗೇಣಿ ನೀಡುವ ಬಗ್ಗೆ ಮತ್ತು ಪಡೆಯುವ ಬಗ್ಗೆ ಶ್ರೀ ಚಿಕ್ಕ ಪೂಜಾರಿ ಮತ್ತು ಜಮೀನಿನ ಒಡೆಯರ ನಡುವೆ ಬಾಯಿ ಮಾತಿನ ಮಾತುಕತೆಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಶ್ರೀಮತಿ ಮಂಜಿ ಪೂಜಾರ್ತಿಯ ಗೇಣಿ ಸೂಡಾ ಚೀಟಿ (Lease surrender) ಆದ ನಂತರ ಚಿಕ್ಕ ಪೂಜಾರಿ ದಾವಾ ಜಮೀನುಗಳ ಗೇಣಿ ಪಡೆದರು ಎಂದರೆ ಸರಿ. ಚಿಕ್ಕ ಪೂಜಾರಿಯು ದಾವಾ ಜಮೀನುಗಳ ಸಾಗುವಳಿ ಮಾಡಿ ಆಯಾಯ ವರ್ಷದ ಗೇಣಿಯನ್ನು ಮಾಲೀಕರಿಗೆ ಪಾವತಿ ಮಾಡುತ್ತಿದ್ದ ಎಂದರೆ ಸರಿ.

**2)** ಶ್ರೀಮತಿ ಮಂಜಿ ಪೂಜಾರ್ತಿಯ ಹಿರಿಯ ಮಗನ ಹೆಸರು ಮಂಜು ಎಂದರೆ ಸರಿ. ಸದರಿ ಮಂಜನ ಹೆಂಡತಿಯ ಮನೆಯು ಕಿರಿಮಂಜೇಶ್ವರ ಗ್ರಾಮದ ನಾಗೂರು ಎಂದರೆ ಸರಿ. 1961ನೇ ಸಾಲಿನಲ್ಲಿ ಮಂಜನು ತನ್ನ ಹೆಂಡತಿಯ ಮನೆಯಲ್ಲಿ ವಾಸ ಮಾಡುತ್ತಿದ್ದ ಎಂದರೆ ಸರಿ. ಶ್ರೀಮತಿ ಮಂಜಿ ಪೂಜಾರ್ತಿಯ ಒಬ್ಬ ಹೆಣ್ಣು ಮಗಳಾದ ಶ್ರೀಮತಿ ಶೇಷಿ ಪೂಜಾರ್ತಿಯು ತನ್ನ ಗಂಡನ ಮನೆ ಇದ್ದ ಕೆರ್ಗಾಲ್ ಗ್ರಾಮದ ಹೊಸಕೋಟೆ ಎಂಬಲ್ಲಿ ವಾಸವಾಗಿದ್ದಳು ಎಂದರೆ ಸರಿ. ಶ್ರೀಮತಿ ಮಂಜಿ ಪೂಜಾರ್ತಿಯ ಮತ್ತೊಬ್ಬ ಹೆಣ್ಣು ಮಗಳಾದ ಶ್ರೀಮತಿ ಚಿಕ್ಕಮ್ಮ ಪೂಜಾರ್ತಿಯು 1961ನೇ ಸಾಲಿನಲ್ಲಿ ತನ್ನ ಗಂಡನ ಮನೆ ಇದ್ದ ಉಪ್ಪುಂದ ಗ್ರಾಮದಲ್ಲಿ ವಾಸವಾಗಿದ್ದಳು ಎಂದರೆ ಸರಿ.

**3)** ದಿನಾಂಕ 01-03-1974ರಂದು ಗೇಣಿ ಕಾಯ್ದೆ ಬಂದ ಸಂದರ್ಭದಲ್ಲಿ ಶ್ರೀ ಚಿಕ್ಕ ಪೂಜಾರಿ ಮಾತ್ರ ದಾವಾ ಜಮೀನುಗಳ ಸ್ವಾಧೀನುಭವದಲ್ಲಿ ಇದ್ದ ಎಂದರೆ ಸರಿ. ಆ ಸಂದರ್ಭದಲ್ಲಿ ಚಿಕ್ಕ ಪೂಜಾರಿಯ ಹೆಂಡತಿಯಾದ ಭೂವಮ್ಮ ಮತ್ತು ಮಕ್ಕಳಾದ 1 ಮತ್ತು 2ನೇ ಪ್ರತಿವಾದಿಗಳು ಚಿಕ್ಕ ಪೂಜಾರಿಯ ಜೊತೆಯಲ್ಲಿ ಇದ್ದರು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ನಮ್ಮ ಜೊತೆ ಇದ್ದರು ಎಂದು ಹೇಳುತ್ತಾರೆ.

**4)** ಚಿಕ್ಕ ಪೂಜಾರಿಯು ದಾವಾ ಜಮೀನುಗಳ ಮಂಜೂರಾತಿಗಾಗಿ ವೈಯುಕ್ತಿಕವಾಗಿ ಅರ್ಜಿ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಚಿಕ್ಕ ಪೂಜಾರಿ ಅವಿದ್ಯಾವಂತ ಮತ್ತು ಹಳ್ಳಿಗ ಎಂದರೆ ಸರಿ. ಕುಂದಾಪುರದ ಭೂನ್ಯಾಯ ಮಂಡಳಿಯು ದಾವಾ ಜಮೀನಿಗೆ ಸಂಬಂಧಿಸಿದಂತೆ ಗೇಣಿ ಹಕ್ಕನ್ನು ಶ್ರೀ ಚಿಕ್ಕ ಪೂಜಾರಿಯ ಹೆಸರಿಗೆ ಮಾತ್ರ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಜಮೀನುಗಳು ಮಂಜೂರಾದ ನಂತರ ಚಿಕ್ಕ ಪೂಜಾರಿಯು ಅವುಗಳನ್ನು ತನ್ನ ವೈಯುಕ್ತಿಕವಾಗಿ ಅನುಭವಿಸುತ್ತಾ ಬಂದಿದ್ದ ಎಂದರೆ ಸರಿ (ಸದರಿ ಪ್ರಶ್ನೆಯನ್ನು ವಕೀಲರು ಕೇಳಿದ ನಂತರ ಸಾಕ್ಷಿಯು ಹೌದು ಎಂದು ಉತ್ತರಿಸಿದ್ದು,

ಸಾಕ್ಷಿಯ ಉತ್ತರದ ನಂತರ ನ್ಯಾಯಾಲಯ ಮತ್ತೊಮ್ಮೆ ಅದೇ ಪ್ರಶ್ನೆಯನ್ನು ಕೇಳಿದಾಗಲೂ ಸಹ ಹೌದು ಎಂದು ಉತ್ತರಿಸಿರುತ್ತಾರೆ).

**5)** ಚಿಕ್ಕ ಪೂಜಾರಿಯ ಸಾಯುವ ಮೊದಲು ಆತನ ಹೆಂಡತಿ ಮರಣ ಹೊಂದಿದ್ದಾಳೆ ಎಂದರೆ ಸರಿ. ಚಿಕ್ಕ ಪೂಜಾರಿಯು ಹೊಂದಿದ ನಂತರ ದಾವಾ ಜಮೀನುಗಳು ವಾರಸುದಾರಿಕೆಯ ಪ್ರಕಾರ ಆತನ ಮಕ್ಕಳಾದ 1 ಮತ್ತು 2ನೇ ಪ್ರತಿವಾದಿಗಳಿಗೆ ಬಂತು ಎಂದರೆ ನನಗೆ ಗೊತ್ತಿಲ್ಲ. ದಾವಾ ಜಮೀನುಗಳ ಪಹಣಿ ಪತ್ರಿಕೆಗಳು ಮೊದಲು ಚಿಕ್ಕ ಪೂಜರಿಯ ಹೆಸರಿನಲ್ಲಿದ್ದವು ಮತ್ತು ಆತನ ಮರಣದ ನಂತರ 1 ಮತ್ತು 2ನೇ ಪ್ರತಿವಾದಿಗಳ ಹೆಸರಿಗೆ ಬದಲಾಗಿವೆ ಎಂದರೆ ಸರಿ, ಸಾಕ್ಷಿ ಮುಂದುವರಿದು ನಮಗೆ ಗೊತ್ತಿಲ್ಲದೇ ಮಾಡಿಕೊಂಡಿದ್ದಾರೆ ಎನ್ನುತ್ತಾರೆ. ಖಾತೆ ಮಾಡಿಕೊಂಡ ಒಂದು ವರ್ಷದ ನಂತರ ನಮಗೆ ಗೊತ್ತಾಯಿತು. ಗೊತ್ತಾದ ನಂತರ ಖಾತೆಯನ್ನು ಬೇರೆ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ.

**6)** 1 ಮತ್ತು 2ನೇ ಪ್ರತಿವಾದಿಗಳು 'ಎ' ಶೆಡ್ಯೂಲಿನ ಕ್ರಮ ಸಂಖ್ಯೆ 1ರ 55 ಸೆಂಟ್ಸ್ ಹಾಗೂ 2 ಮತ್ತು 17ರ ಜಮೀನುಗಳನ್ನು ದಿನಾಂಕ 28-07-2021ರಂದು ಮಾರುಕಟ್ಟೆ ಬೆಲೆಗೆ 13ನೇ ಪ್ರತಿವಾದಿಯಾದ ರಾಮಕೃಷ್ಣ ಪೂಜಾರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಖರೀದಿ ಮಾಡಿದ ನಂತರ ಸದರಿ ಆಸ್ತಿಗಳನ್ನು 13ನೇ ಪ್ರತಿವಾದಿ ಅಭಿವೃದ್ಧಿ ಮಾಡಿದ್ದಾರೆ ಎಂದರೆ ಸರಿಯಲ್ಲ.

**7)** 1 ಮತ್ತು 2ನೇ ಪ್ರತಿವಾದಿಗಳು 'ಎ' ಶೆಡ್ಯೂಲಿನ ಕ್ರಮ ಸಂಖ್ಯೆ 1ರ 40 ಸೆಂಟ್ಸ್ ಹಾಗೂ 5, 6, 9 ಮತ್ತು 18ರ ದಾವಾ ಜಮೀನುಗಳನ್ನು ದಿನಾಂಕ 28-07-2021ರಂದು ಮಾರುಕಟ್ಟೆ ಬೆಲೆಗೆ 35ನೇ ಪ್ರತಿವಾದಿಯಾದ ಶ್ರೀಮತಿ ಪಾರ್ವತಿ ಪೂಜಾರ್ತಿ ಅವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಖರೀದಿ ಮಾಡಿದ ನಂತರ ಸದರಿ ಆಸ್ತಿಗಳನ್ನು 35ನೇ ಪ್ರತಿವಾದಿ ಅಭಿವೃದ್ಧಿ ಮಾಡಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ಅಭಿವೃದ್ಧಿ ಮಾಡಲು ನಾವು ಬಿಟ್ಟಿಲ್ಲ ಎನ್ನುತ್ತಾರೆ.

**8)** ಖರೀದಿ ಪ್ರಕಾರ ಸದರಿ ಆಸ್ತಿಗಳ ಪಹಣಿ ಪತ್ರಿಕೆಗಳು 13 ಮತ್ತು 35ನೇ ಪ್ರತಿವಾದಿಗಳ ಹೆಸರಿಗೆ ಬದಲಾಗಿವೆ ಎಂದರೆ ಸರಿ, ಸಾಕ್ಷಿಯು ಮುಂದುವರಿದು ನಮಗೆ ಗೊತ್ತಿಲ್ಲದೇ ಮಾಡಿಕೊಂಡಿದ್ದಾರೆ ಎನ್ನುತ್ತಾರೆ. 13 ಮತ್ತು 35ನೇ ಪ್ರತಿವಾದಿಗಳು ತಾವು ಖರೀದಿ ಮಾಡಿದ ಆಸ್ತಿಗಳನ್ನು ಸಹಕಾರ ಸಂಘಗಳಿಗೆ ಅಡವಿಟ್ಟು ಸಾಲ ಪಡೆದು ಸದರಿ ಆಸ್ತಿಗಳನ್ನು ಅಭಿವೃದ್ಧಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 13 ಮತ್ತು 35ನೇ ಪ್ರತಿವಾದಿಗಳ ಖರೀದಿ ಪತ್ರಗಳನ್ನು ರದ್ದು ಮಾಡುವಂತೆ ನಾನು ಯಾವುದೇ ಕಾನೂನು ಕ್ರಮ ತೆಗೆದುಕೊಂಡಿಲ್ಲ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ನನಗೆ, ಇತರೆ ವಾದಿಗಳಿಗೆ ಹಾಗೂ 1 ಮತ್ತು 2ನೇ ಪ್ರತಿವಾದಿಗಳನ್ನು ಬಿಟ್ಟು ಇತರೆ ಪ್ರತಿವಾದಿಗಳಿಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ.

**9)** 1 ಮತ್ತು 2ನೇ ಪ್ರತಿವಾದಿಗಳ ಸ್ವಾಧೀನಕ್ಕೆ ನಾವು ತೊಂದರೆ ನೀಡಿಲ್ಲ. ದಾವಾ ಆಸ್ತಿಗಳು ವಿಭಾಗವಾಗುವ ಆಸ್ತಿಗಳಲ್ಲ ಎಂದರೆ ಸರಿಯಲ್ಲ. 12 ಮತ್ತು 14ನೇ ಪ್ರತಿವಾದಿಗಳಾದ ಸೂರ ಮತ್ತು ಅಕ್ಕಮ್ಮ ನನಗೆ ಆತ್ಮೀಯರು ಎಂದರೆ ಸರಿ. 12 ಮತ್ತು 14 ಹಾಗೂ 13ನೇ ಪ್ರತಿವಾದಿಗಳ ನಡುವೆ ದ್ವೇಷವಿದೆ ಎಂದರೆ ನನಗೆ ಗೊತ್ತಿಲ್ಲ. 12 ಮತ್ತು 14ನೇ ಪ್ರತಿವಾದಿಗಳ ಮಾತು ಕೇಳಿ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಮಗೆ ಹಕ್ಕು ಇಲ್ಲದೆ ಇದ್ದರೂ ಸಹ 13 ಮತ್ತು 35ನೇ ಪ್ರತಿವಾದಿಗಳಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ದಾವೆ ಮತ್ತು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ</u>** : ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಕುಂದಾಪುರ**